# ಕರ್ನಾಟಕ ವಿಧಾನ ಸಭೆ

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1046 |
| ಸದಸ್ಯರ ಹೆಸರು | : | ಶ್ರೀ ಸಲೀಂ ಅಹಮದ್ |
| ಉತ್ತರಿಸುವ ದಿನಾಂಕ | : | 24.02.2023. |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಮತ್ತು<br>ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರಿಗೆ ಯಾವ ಯಾವ ಸೌಲಭ್ಯಗಳನ್ನು ನೀಡಲಾಗುತ್ತಿದೆ;</td><td>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಜನರಿಗೆ ನೀಡಲಾಗುತ್ತಿರುವ ಸೌಲಭ್ಯಗಳ ವಿವರ ಈ ಕೆಳಕಂಡಂತಿದೆ.<br>1. ಸ್ವಯಂ ಉದ್ಯೋಗ ನೇರಸಾಲ ಯೋಜನೆ<br>2. ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ<br>3. ಮೈಕ್ರೋ ಕ್ರೆಡಿಟ್ (ಪ್ರೇರಣಾ) ಯೋಜನೆ<br>4. ಗಂಗಾ ಕಲ್ಯಾಣ ಯೋಜನೆ<br>5. ಭೂ ಒಡೆತನ ಯೋಜನೆ</td></tr>
<tr><td>ಆ)</td><td>ಈ ನಿಗಮದಲ್ಲಿ ಕಳೆದ 03 ವರ್ಷಗಳಿಂದ ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿ, ಕ್ರಿಯಾ ಯೋಜನೆಗೆ ಅನುಮೋದನೆಯನ್ನು ಪಡೆಯದೆ ಹಣವನ್ನು ವೆಚ್ಚ ಮಾಡಿರುವ ಪ್ರಕರಣಗಳ ಸಂಖ್ಯೆ ಎಷ್ಟು;</td><td>ಕಳೆದ 03 ವರ್ಷಗಳಲ್ಲಿ ಕ್ರಿಯಾ ಯೋಜನೆ ಅನುಮೋದನೆ ಪಡೆಯದೇ ಯಾವುದೇ ಹಣವನ್ನು ವೆಚ್ಚ ಮಾಡಿರುವ ಪ್ರಕರಣಗಳು ಇರುವುದಿಲ್ಲ</td></tr>
<tr><td>ಇ)</td><td>ಐರಾವತ ಮತ್ತು ಸಮೃದ್ಧಿ ಯೋಜನೆಯಲ್ಲಿ ಯಾವುದೇ ಗುರಿ ಇಲ್ಲದಿದ್ದರೂ ಫಲಾನುಭವಿಗಳನ್ನು ನೇರವಾಗಿ ಆಯ್ಕೆಯನ್ನು ಮಾಡಿರುವುದು ಹಾಗೂ ವಿವಿಧ ಯೋಜನೆಗಳ ಅಡಿಯಲ್ಲಿ ಸೌಲಭ್ಯಗಳನ್ನು ಪಡೆಯಲು ಅರ್ಜಿಯನ್ನು ಸಲ್ಲಿಸದೇ ಇದ್ದರೂ ಸಹ ಸದರಿಯವರ ಹೆಸರಿಗೆ ಮಂಜೂರು ಮಾಡಿರುವುದು ಸರ್ಕಾರದ ಗಮನದಲ್ಲಿದೆಯೇ; ಈ ಅಕ್ರಮಕ್ಕೆ ಸಹಕರಿಸಿದ ಅಧಿಕಾರಿಗಳ ವಿರುದ್ಧ ಸರ್ಕಾರದ ಕ್ರಮವೇನು?</td><td>ಐರಾವತ ಮತ್ತು ಸಮೃದ್ಧಿ ಯೋಜನೆಗೆ ಸಂಬಂಧಿಸಿದಂತೆ 2018-19ನೇ ಸಾಲಿನಲ್ಲಿ ಆನ್ ಲೈನ್ ಮುಖಾಂತರ ಸ್ವೀಕರಿಸಿದ ಅರ್ಜಿ ಹಾಗೂ ಗುರಿ ವಿವರ ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ಯೋಜನೆ</th><th>ಭೌತಿಕಗುರಿ</th><th>ಆನ್‌ಲೈನ್ ನಲ್ಲಿ ಸ್ವೀಕರಿಸಿದ ಅರ್ಜಿಗಳ ಸಂಖ್ಯೆ</th><th>ಸೌಲಭ್ಯ ಪಡೆದವರ ಅರ್ಜಿಗಳ ಸಂಖ್ಯೆ</th><th>ಬಾಕಿ ಉಳಿದಿರುವ ಅರ್ಜಿ ಸಂಖ್ಯೆ</th></tr>
<tr><td rowspan="2">2018-19</td><td>ಐರಾವತ</td><td>1575</td><td>8500</td><td>1575</td><td>6925</td></tr>
<tr><td>ಸಮೃದ್ಧಿ</td><td>630</td><td>36170</td><td>630</td><td>35540</td></tr>
<tr><td rowspan="2">2019-20</td><td>ಐರಾವತ</td><td>560</td><td>-</td><td>560</td><td>-</td></tr>
<tr><td>ಸಮೃದ್ಧಿ</td><td>95</td><td>-</td><td>95</td><td>-</td></tr>
<tr><td colspan="2">ಒಟ್ಟು</td><td>2860</td><td>44670</td><td>2860</td><td>42465</td></tr>
</table>
2018-19ನೇ ಸಾಲಿನಲ್ಲಿ ಸೌಲಭ್ಯ ನೀಡಿ ಬಾಕಿ ಉಳಿದಿದ್ದ 42465 ಅರ್ಜಿಗಳ ಪೈಕಿ 665 ಅರ್ಜಿಗಳಿಗೆ 2019-20ನೇ ಸಾಲಿನ ಗುರಿಗೆ ಪರಿಗಣಿಸಿ ನಿಯಮಾನುಸಾರ ಆಯ್ಕೆ ಮಾಡಿಕೊಂಡು ಮಂಜೂರು ಮಾಡಲಾಗಿದೆ. ಹಾಗೂ ಸೌಲಭ್ಯವನ್ನು ಪಡೆಯಲು ಅರ್ಜಿಸಲ್ಲಿಸದೇ ಯಾವುದೇ ಫಲಾಪೇಕ್ಷಿಯ ಹೆಸರಿಗೆ ಮಂಜೂರು ಮಾಡಿರುವುದಿಲ್ಲ.</td></tr>
</table>

**ಸಂಖ್ಯೆ: ಸಕಇ 85 ಎಸ್‌ಡಿಸಿ 2023**

**(ಕೋಟಾ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.